ಶ್ರೀ ಹೆಚ್ ಗಂಗಾಧರನ್.—ಇದು ೩ ಸಾವಿರ ಜನ ಕೆಲಸಗಾರರ ಸಮಸ್ಯೆ, ಇಲ್ಲಿರುವವರನ್ನೆಲ್ಲಾ ಹೊರಗೆ ಹಾಕಿ ಲಾಕ್ ಔಟ್ ಮಾಡಿದ್ದಾರೆ.

ಶ್ರೀ ಪಂಪಾಪತಿ.—ಸ್ವಾಮಿ, ಇದು ೩ ಸಾವಿರ ಜನರ ನಿರುದ್ಯೋಗದ ಸಮಸ್ಯೆ, ಬೇಗನೆ ತೆಗೆದುಕೊಳ್ಳಬೇಕು

ಅಧ್ಯಕ್ಷರು.—ಈ ಬಗ್ಗೆ ವರದಿ ತರಿಸುವುದಕ್ಕೆ ಸರ್ಕಾರಕ್ಕೆ ಬರೆದಿದ್ದೇನೆ. ಸರ್ಕಾರದಿಂದ ವರದಿಯನ್ನು ಆದಷ್ಟು ಜಾಗ್ರತೆಯಾಗಿ ತರಿಸುತ್ತೇನೆ. ನಂತರ ಹಾಕುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ ಇದು ಸಾವಿರಾರು ಜನರ ಕೆಲಸಗಾರರ ಪ್ರಶ್ನೆ, ನಿರುದ್ಯೋಗದ ಪ್ರಶ್ನೆ ದಯವಿಟ್ಟು ಆದಷ್ಟು ಜಾಗ್ರತೆಯಾಗಿ ಸರ್ಕಾರದಿಂದ ಉತ್ತರವನ್ನು ತರಿಸುತ್ತೀರಾ?

ಅಧ್ಯಕ್ಷರು.—ಆದಷ್ಟು ಜಾಗ್ರತೆ ಉತ್ತರವನ್ನು ತರಿಸುತ್ತೇನೆ.

CALLING ATTENTION TO A MATTER OF URGENT PUBLIC IMPORTANCE

SRI G. B. SHANKAR RAO (Minister for Education).— Sir I wish to make the following.

The policy of Government in regard to admissoin to Engineering College was made clear last year itself. In accordance with this policy, Government decided to abolish the system of levy of capitation fee in a phased manner. Government has also taken a decision to reserve 50% of the seats for the students passing from the Institutions coming under the jurisdiction of the University concerned. The order No. ED 168 TGL 80, dated 5-9-1981 embodying the above principles was issued in September 1981.

This order was challenged in the Hon'ble High Court of Karnataka by the Aided and Unaided Engineering Institutions. An order staying the operation of the G. O. has been issued by the Hon'ble High Court. The Advocate General has been requested to move the High Court for vacation of the stay order.

ಶ್ರೀ ಪಿ. ಎನ್. ರೆಡ್ಡಿ.—ಮಾನ್ಯ ಅಧ್ಯಕ್ಷರೇ ನಾನು ಕಳುಹಿಸಿದ ವಿಷಯವೇ ಬೇರೆ, ಆದರೆ ತಾವು ಕೊಟ್ಟಿರುವ ಹೇಳಿಕೆಯೇ ಬೇರೆಯಾಗಿದೆ ನನ್ನ ಸೂಚನೆ ಮತ್ತು ವಿರೋಧ ಪಕ್ಷದ ಸದಸ್ಯರಾದ ಎಸ್.ಆರ್. ಬೊಮ್ಮಾಯಿಯವರು ಮತ್ತೆ ಕೆಲವರು ಕೊಟ್ಟ ಸೂಚನೆಯನ್ನೂ ಸೇರಿಸಿ ಪಾಲಿಸಿ ಮ್ಯಾಟರ್ ಎಂದು ಹೇಳಿಕೆಯನ್ನು ತಾವು ಕೊಟ್ಟಿದ್ದೀರಿ. ನಾನು ಕಳುಹಿಸಿದ ಸೂಚನೆ ಈ ರೀತಿಯಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಅರ್ಜಿಯನ್ನು ಪೇಪರ್‌ನಲ್ಲಿಯೇ ಪ್ರಕಟ ಮಾಡಿದ್ದಾರೆ. ತಪ್ಪು ಪ್ರಕಟಣೆಯಂತೆ ಕಂಪ್ಯೂಟರ್ ರೀತಿಯಲ್ಲಿ ಒಂದು ಹೊಸ ಸಿಸ್ಟಂನ್ನು ಜಾರಿಗೆ ತಂದ ಹಾಗೆ ಕಾಣುತ್ತದೆ. ವಿದ್ಯಾರ್ಥಿಗಳ ಯೋಗ್ಯತೆಯನ್ನು ಪರಿಶೀಲಿಸಲು ಈ ರೀತಿಯ ಸಿಸ್ಟಂನ್ನು ಮಾಡಿದ್ದಾರೆಯೇ ಎಂದು ನಾನು ಕೇಳಬೇಕಾಗಿದೆ. ಈ ಹೊಸ ಪದ್ಧತಿಯನ್ನು ಹಳ್ಳಿಯಿಂದ ಬಂದ ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಇದರಲ್ಲಿ alphabeticals ಮತ್ತು code ಮುಂತಾದುವುಗಳನ್ನು ಉಪಯೋಗಿಸಿ ಇದಂ ದೊಡ್ಡ ದೊಡ್ಡ ಪದವೀಧರರಿಗೂ ಅರ್ಥವಾಗದ ರೀತಿಯಲ್ಲಿದೆ. ಈ ಪ್ರವೇಶಕ್ಕೆ ಅರ್ಜಿಯ ನಮೂನೆ ಯಾವ ಪತ್ರಿಕೆಯಲ್ಲಿ ಬರುತ್ತದೆನ್ನುವುದು ಹಳ್ಳಿಯ ವಿದ್ಯಾರ್ಥಿಗಳಿಗೆ ಗೊತ್ತಾಗುವುದಿಲ್ಲ. ಇದರ ಜೊತೆಯಲ್ಲಿ ೧೦ ರೂಪಾಯಿಂಗಳ ಪೋಸ್ಟಲ್ ಆರ್ಡರ್ ಸಹ ಹಚ್ಚಬೇಕು ಎಂದು ಹೇಳಿದ್ದಾರೆ. ಈಗ ಪೋಸ್ಟಲ್ ಆರ್ಡರ್‌ಗಳು ಸಿಕ್ಕುವುದು ಕಷ್ಟ

ವಾಗಿದೆ. ಹಿಂದೆ, ಈ ಪೋಸ್ಟಲ್ ಆರ್ಡರ್‌ಗಳು ಸಿಕ್ಕದೆ ತೊಂದರೆಯಾಗಿ, ಐದು ರೂಪಾಯಿಗಳ ಎರಡು ಪೋಸ್ಟಲ್ ಆರ್ಡರ್ ಒಂದು ರೂಪಾಯಿಗಳ ಹತ್ತು ಪೋಸ್ಟಲ್ ಆರ್ಡರ್ಸ್‌ನ್ನು ಹೆಚ್ಚತಕ್ಕದ್ದು ನಮ್ಮ ಗಮನಕ್ಕೆ ಬಂದ ವಿಷಯವಾಗಿದೆ. ನಾವು ನಮ್ಮ ನೋಟೀಸ್‌ನಲ್ಲಿ ಪ್ರಸ್ತಾಪ ಮಾಡಿಲ್ಲವುದು ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಅರ್ಜಿಯ ನಮೂನೆಯನ್ನು ಮಾಡಿರುವ ಬಗ್ಗೆ, ಕ್ಯಾಪಿಟೇಷನ್ ಫೀ ವಿಷಯವನ್ನು ನಾವು ಪ್ರಸ್ತಾಪ ಮಾಡಿಲ್ಲ. ಇದು ಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ಇಂಟರ್‌ಡ್ಯೂಸ್ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ಕಷ್ಟವಾಗುತ್ತದೆ. ಈ ಹೊಸ ಪದ್ಧತಿಯನ್ನು ಜಾರಿಗೆ ತಂದಿರುವುದರಿಂದ ಅನೇಕ ವಿದ್ಯಾರ್ಥಿಗಳ ಅರ್ಜಿಗಳು ವಜಾ ಆಗುವ ಸಂದರ್ಭ ಇರುತ್ತದೆ. ಮಾರ್ಕ್ಸ್ ಕಾರ್ಡ್ ಹಚ್ಚುವುದರಲ್ಲಿ, ಕೋಡ್ ಉಪಯೋಗ ಮಾಡುವುದರಲ್ಲಿ, ಬಾಲ್‌ಪೆನ್ ಉಪಯೋಗ ಮಾಡುವಲ್ಲಿ ಮತ್ತು ಇನ್ನೇನೋ ಬರೆಯುವಲ್ಲಿ ವಿದ್ಯಾರ್ಥಿಗಳು ತಪ್ಪು ಮಾಡಿದ್ದರೆ ಅದನ್ನು ತಪ್ಪೆಂದು ಪರಿಗಣಿಸದೆ ಅವರ ಅರ್ಜಿಯನ್ನು ಪುರಸ್ಕಾರ ಮಾಡಬೇಕು ಹೊಸದಾಗಿ ಈ ಪದ್ಧತಿ ಬಂದಿರುವುದರಿಂದ ವಿದ್ಯಾರ್ಥಿಗಳ ಅರ್ಜಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ವಿದ್ಯಾರ್ಥಿಗಳಿಗೂ ಹಾಗೂ ಅವರ ಮಾತಾ ಪಿತೃಗಳಿಗೆ ತೊಂದರೆಯಾಗದ ಹಾಗೆ ಅನುಕೂಲ ಮಾಡಬೇಕು ನಾನು ವಿದ್ಯಾ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ವಿದ್ಯಾಮಂತ್ರಿಗಳು ನಾಳೆ ಇದನ್ನು ಪುನಃ ಪರಿಶೀಲನೆ ಮಾಡಿದರೆ ಒಳ್ಳೆಯದು, ಏಕೆಂದರೆ, ಮಾನ್ಯ ಸದಸ್ಯರಾದ ರೆಡ್ಡಿಯವರು ಕೇಳಿರತಕ್ಕ ವಿಷಯ, ಮಾನ್ಯ ಬೊಮ್ಮಾಯಿಯವರು ಕೇಳಿರತಕ್ಕ ವಿಷಯ ಬೇರೆ ಬೇರೆಯಾಗಿರುವುದರಿಂದ ತಾವು ಎರಡು ವಿಷಯಗಳನ್ನು ಇನ್ನೊಮ್ಮೆ ಪರಿಶೀಲನೆ ಮಾಡಿ ಸಮಂಜಸವಾದ ಹೇಳಿಕೆಯನ್ನು ಕೊಡುವುದು ಉತ್ತಮ.

ಶ್ರೀ ಬಿ.ಎನ್. ಬಚ್ಚೇಗೌಡ.—ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಈ ತಿಂಗಳ ೩೦ನೇ ತಾರೀಖು ಕೊನೆಯ ದಿವಸವಾಗಿರುವುದರಿಂದ ನಾನಾ ಕಾರಣಗಳಿಂದ ವಿದ್ಯಾರ್ಥಿಗಳು ಅರ್ಜಿಗಳನ್ನು ಹಾಕುವುದು ತಡವಾಗಿದೆ. ಕೊನೆಯ ದಿನಾಂಕವನ್ನು ಇನ್ನೂ ಒಂದು ವಾರದವರೆಗೆ ಮುಂದುವರಿಸುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ವಿದ್ಯಾ ವ ಂತ್ರಿಗಳು ಇನ್ನೊಂದು ವಿಚಾರವನ್ನು ಗಮನಿಸಬೇಕು. ಈ ಹತ್ತು ರೂಪಾಯಿಗಳ ಪೋಸ್ಟಲ್ ಆರ್ಡರ್ ಹುಬ್ಬಳ್ಳಿ ಧಾರವಾಡಗಳಲ್ಲಿ ದೊರೆಯುತ್ತಿಲ್ಲ. ಇದಕ್ಕೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ, ಬ್ಯಾಂಕ್ ಡ್ರಾಫ್ಟ್‌ನ್ನು ಹಚ್ಚಬಹುದೇ ? ಅರ್ಜಿಯು ಹಾಕುವುದಕ್ಕೆ ಕೊನೆಯ ದಿನಾಂಕವನ್ನು ಇನ್ನೂ ಒಂದು ವಾರ ಮುಂದೆ ಹಾಕುವುದಕ್ಕೆ, ಇನ್‌ಸ್ಟ್ರಕ್ಷನ್ಸ್ ಕೊಡುತ್ತೀರಾ ?

ಶ್ರೀ ಜಿ.ಬಿ. ಶಂಕರರಾವ್.—ಪ್ರವೇಶದ ಅರ್ಜಿಯನ್ನು ಹಾಕುವುದಕ್ಕೆ ನಾವು ಸಾಕಷ್ಟು ಮುಂಚಿತವಾಗಿಯೇ ಪ್ರಕಟಣೆಯನ್ನು ಮಾಡಿದ್ದೇವೆ.

ಅಧ್ಯಕ್ಷರು.—ಒಂದೆರಡು ದಿವಸ ಮುಂದೆ ಹಾಕುವುದಾದರೆ ಯೋಚನೆ ಮಾಡಿ ನಾಳೆ ಇದರ ಬಗ್ಗೆ ಸೂಕ್ತವಾದಂಥ ಉತ್ತರ ಕೊಡತಕ್ಕದ್ದು ಉತ್ತಮ.

ಶ್ರೀ ಜಿ.ಬಿ. ಶಂಕರರಾವ್.—ಹತ್ತು ರೂಪಾಯಿಗಳ ಪೋಸ್ಟಲ್ ಆರ್ಡರ್ ಕೊಡಬೇಕು ಎಂದು ಇದೆ, ಹತ್ತು ರೂಪಾಯಿಗಳದೇ ಹಾಕಬೇಕು ಎಂದೇನೂ ಇಲ್ಲ, ಬೇರೆ ಬೇರೆ ಡಿನಾಮಿನೇಷನ್ ಕೂಡ ಹಚ್ಚಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಪೋಸ್ಟಲ್ ಆರ್ಡರ್‌ಗಳೇ ಸಿಕ್ಕುತ್ತಿಲ್ಲ. ವಿದ್ಯಾರ್ಥಿಗಳು ೨೦ ರೂಪಾಯಿಗಳ ಪೋಸ್ಟಲ್ ಆರ್ಡರನ್ನು ಹೆಚ್ಚಲಿಕ್ಕೆ ತಯಾರಿದ್ದಾರೆ.

ಅಧ್ಯಕ್ಷರು.—ನಾಳೆ ದಿವಸ ತಾವು ಇದರ ಬಗ್ಗೆ ಸ್ಪಷ್ಟೀಕರಣ ಕೊಡುವ ದೃಷ್ಟಿಯಿಂದ ಸ್ವಲ್ಪ ಕಾಲ ಕೊನೆಯ ದಿನಾಂಕವನ್ನು ಮುಂದಕ್ಕೆ ಹಾಕುವುದು ಉತ್ತಮ ಎಂದು ಕಾಣುತ್ತದೆ. ನಾಳೆ ತಾವು ಹೇಳುತ್ತೇನೆಂದರೆ, ವಿದ್ಯಾರ್ಥಿಗಳಿಗೆ ಕನ್‌ಫ್ಯೂಸ್ ಆಗಿ ಬಹಳ ತೊಂದರೆಯಾಗುತ್ತದೆ.

ಶ್ರೀ ಜಿ.ಬಿ. ಶಂಕರರಾವ್.—ಪ್ರವೇಶದ ಅರ್ಜಿಯ ನಮೂನೆಯನ್ನು ನಾವು ಬಹಳ ಮುಂಚಿತವಾಗಿಯೇ ಪ್ರಕಟ ಮಾಡಿದ್ದೇವೆ. ಕೊನೆಯ ದಿನಾಂಕವನ್ನು ಮುಂದೆ ಹಾಕುತ್ತಾ ಹೋದರೆ ಕಾಲೇಜು ಪ್ರಾರಂಭ ಮಾಡುವುದು ಕಷ್ಟವಾಗುತ್ತದೆ.

ಅಧ್ಯಕ್ಷರು.—ಕೊನೆಯ ದಿನಾಂಕವನ್ನು ನಾಲ್ಕು ದಿವಸ ಮುಂದೆ ಹಾಕಿದರೆ ತೊಂದರೆಯೇನೂ ಆಗಲಾರದು. ತಾವು ಈಗ ಹೇಳಿದರೆ, ಅದು ಪತ್ರಿಕೆಯಲ್ಲಿ ಬಂದರೆ ಮಕ್ಕಳಿಗೆ ಅನುಕೂಲವಾಗುತ್ತದೆ.

ಶ್ರೀ ಜಿ. ಬಿ. ಶಂಕರರಾವ್.—ಹಾಗೆ ಪಂಂದುವರಿಸುತ್ತಾ ಹೋದರೆ ಟರ್ಮ್ ಡೇಸ್ ಕಡಿಮೆ ಯಾಗುತ್ತದೆ. Supposing we extend by 5 days would it help the students? i.e. we can give time upto 5th of next month.

ಶ್ರೀ ಎಸ್.ಆರ್ ಬೊಮ್ಮಾಯಿ.—ನಾನು ಹಿಂದೆ ಸಭೆಯಲ್ಲಿ ಎರಡು ಸಲ ಪ್ರಸ್ತಾಪ ಮಾಡಿದ್ದೇನೆ. ಈ ಕಾಲೇಜುಗಳ ಪ್ರವೇಶದ ಬಗ್ಗೆ ಇನ್‌ಟೇಕ್ ಮತ್ತು ಕ್ಯಾಪಿಟೇಷನ್ ಫೀಸ್ ನಮ್ಮ ರಾಜ್ಯದವರಿಗೆ ಎಷ್ಟು ಇರಬೇಕು, ಹೊರರಾಜ್ಯದವರಿಗೆ ಎಷ್ಟು ಇರಬೇಕು ಎನ್ನುವುದರ ಬಗ್ಗೆ ನಾನು ಎರಡು ಸಭೆಯಲ್ಲಿ ಚರ್ಚೆ ಮಾಡಿದ್ದೇನೆ. ಮಾನ್ಯ ಮಂತ್ರಿಗಳಿಂದ ಇದರ ಬಗ್ಗೆ ಹೇಳಿಕೆ ಬರಲಿಲ್ಲ. ಎಲ್ಲಾ ವಿಷಯಗಳ ಬಗ್ಗೆ ನಮಗೆ ವಿವರವಾದ ಹೇಳಿಕೆ ಬೇಕು. ಕೆಲವು ಕಾಲೇಜುಗಳಲ್ಲಿ ಹೋದ ವರ್ಷ ಇನ್‌ಟೇಕ್ ೧೦೦ ಇದ್ದರೆ ೧೨೦ ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿದ್ದಾರೆ. ಕ್ಯಾಪಿಟೇಷನ್ ಫೀ ನಿಗದಿ ಮಾಡಿರುವುದು ಎಷ್ಟು, ಇವರು ವಸೂಲಿ ಮಾಡಿರುವುದು ಎಷ್ಟು, ಹುಬ್ಬಳ್ಳಿಯ ಕಾಲೇಜೊಂದರಲ್ಲಿ ಅವರಿಗೆ ಕೊಟ್ಟಿರ ತಕ್ಕ ಇನ್‌ಟೇಕ್‌ಗಿಂತಲೂ ಜಾಸ್ತಿಯಾಗಿ ಅಡ್ಮಿಷನ್ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದ ಪಾಲಿಸಿ ಏನು ಎನ್ನುವುದು ನಮಗೆ ಹೇಳಬೇಕು.

ಅಧ್ಯಕ್ಷರು.—ತಮ್ಮ ಗಮನ ಸೆಳೆಯುವ ಸೂಚನೆ ಇದಕ್ಕೆ ಸೀಮಿತವಾಗಿದೆ. ಸರ್ಕಾರದ ಪಾಲಿಸಿ ಏನು ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

SRI S.R. BOMMAI.—In my notice itself I have asked for the details relating to the policy of the State Government for the admission of students into Engineering colleges. ಮಾನ್ಯ ಅಧ್ಯಕ್ಷರೇ, ಅವರು ಹಿಂದೆ ಕೂಡ ನಮಗೆ ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಪ್ರೈಮ್ ಮಿನಿಸ್ಟರ್‌ರವರ ಡೈರೆಕ್ಷನ್ ಪ್ರಕಾರ ಕ್ಯಾಪಿಟೇಷನ್ ಫೀಯನ್ನು ಅಬಾಲಿಷ್ ಮಾಡುತ್ತೇವೆಂದು ಹೇಳಿದ್ದಾರೆ. ಈ ವರ್ಷ ಈ ಬಗ್ಗೆ ಏನು ಮಾಡುತ್ತಾರೆಯೋ ಗೊತ್ತಿಲ್ಲ. Are you going to abolish capitation fee completely this year ?

SRI G. B. SHANKARA RAO.—In a phased manner we are trying to abolish it. But, unfortunately it was stayed in the High Court.

ಶ್ರೀ ಎಸ್.ಆರ್. ಬೊಮ್ಮಾಯಿ.—ಗೌರ್ನಮೆಂಟ್ ಆರ್ಡರ್‌ರಲ್ಲಿ ಕ್ಯಾಪಿಟೇಷನ್ ಫೀ ಅಭಾಲಿಷನ್ ಬಗ್ಗೆ ಹೇಳಿದ್ದಾರೆ. ಅಭಾಲಿಷನ್ ಎಂದರೆ ಅದರಲ್ಲಿ ಎಲ್ಲಾ ಬರುತ್ತದೆ.

MR. SPEAKER.—In your notice you have asked details regarding the abolition of capitation fee and other things. Shall I read your notice ?

> "Admission to Medical colleges and Engineering colleges..."

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಅಭಾಲಿಷನ್ ಎಂದರೆ ಅದು ಕ್ಯಾಪಿಟೇಷನ್ ಫೀ ಬಗ್ಗೆ ಬರುತ್ತದೆ. ಲಾಸ್ಟ್‌ಟೈಮ್ ಅವರು ಅದನ್ನು ಅಭಾಲಿಷ್ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಈ ವರ್ಷ ಅವರು ಅದನ್ನು ಅಬಾಲಿಷ್ ಮಾಡುತ್ತಾರೆಯೋ ಇಲ್ಲವೋ ಅಥವಾ ಏನು ಮಾಡುತ್ತಾರೆಯೋ ಗೊತ್ತಿಲ್ಲ. ಲಾಸ್ಟ್‌ಟೈಮ್ ಅವರು ಒಪ್ಪಿಕೊಂಡ ಪ್ರಕಾರ ಅಬಾಲಿಷನ್ ಮಾಡಬೇಕು. ಈ ಸಭೆಯಲ್ಲೇ ಅವರು ಒಂದು ಸ್ಟೇಟ್‌ಮೆಂಟ್ ಕೂಡ ಕೊಟ್ಟಿದ್ದಾರೆ.

SRI G. B. SHANKARA RAO.—The hon. member Sri S R. Bommai wants some other details besides the abolition of capitation fee, *i e*,. details regarding admission to medical colleges and other particulars. If that is so, I may require one or two days more to furnish those de

tails. He has asked details about the intake and other things. When once the intake is fixed and permitted, the engineering and medical colleges should not exceed such intake If it exceeds over and abovethe sanctioned intake it is illegal and the Universit cannot permit such students who have been admitted in excess and also they will not be allowed to take their examinations.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಏನೊಂದು ಇನ್‌ಟೇಕ್ ಫಿಕ್ಸ್ ಮಾಡಿದ್ದಾರೆ ಅದಕ್ಕಿಂತ ಹೆಚ್ಚು ಸೀಟುಗಳನ್ನು ಅಲ್ಲಿ ತೆಗೆದುಕೊಂಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಯವರಿಂದ ಕೂಡ ಶಿಫಾರಸ್ಸು ಹೋಗಿದೆ.

ಅಧ್ಯಕ್ಷರು — ಮಾನ್ಯ ಮಂತ್ರಿಯವರು ಆ ಬಗ್ಗೆ ಹೇಳಿಕೆ ಕೊಟ್ಟ ಮೇಲೆ ನೀವು ಆ ವಿಚಾರವನ್ನು ಪ್ರಸ್ತಾಪ ಮಾಡಿ.

SRI G.B. SHANKARA RAO.—Sir, we have extended the time for submitting the application upto 5th of next month. So, we shall have it on Friday.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಪೇಪರ್‌ನಲ್ಲಿ ಒಂದು ಅಡ್ವರ್‌ಟೈಸ್‌ಮೆಂಟ್ ಬಂದಿದೆ. ಅದರ ಬಗ್ಗೆ ಕೂಡ ಏನೋ ಒಂದು ಕನ್‌ಫ್ಯೂಷನ್ ಇದೆ. ಅದನ್ನೂ ಸಹ ಮಾನ್ಯ ಮಂತ್ರಿಯವರು ಕ್ಲಿಯರ್ ಮಾಡಬೇಕು.

MR. SPEAKER.—We shall take up the notice of Sri P.N. Reddy tomorrow because that matter pertains to a policy matter. We shall have it tomorrow. ಶ್ರೀ ಬೊಮ್ಮಾಯಿಯವರದೂ ನಾಳೆ ತೆಗೆದುಕೊಳ್ಳೋಣ.

SRI S.R. BOMMAI.—Sir, I present the 12th Report of the Committee on Public Accounts...

Statement by the Minister for Forests, Mines and Geology.—

Re : Revision of Seigniorage Rates.

MR. SPEAKER.—I have received a letter from the Hon. Minister for Forest, Mines and Geology stating that he is going to make a statement.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ,...

Sri S. R. BOMMAI.— Sir, the hon. Minister should make his statement after the regular business in the agenda is over. Otherwise, we will be deviating from the agenda.

(*interruptions*)

MR. SPEAKER.— Either it is earlier or later, both will be there on the record. Both will go into the record.

SRI S R. BOMMAI.— Sir, it is strictly according to the agenda. The agend should have presedence over the statement of the Minister

MR. SPEAKER.— I cannot understand why the hon. Member is persisting like this.